# ಬೆಂಗಳೂರು ಪೂರ್ವ ನಗರ ಪಾಲಿಕೆ

## ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ

ಆರ್.ಹೆಚ್.ಬಿ ಕಾಲೋನಿ. ಫಿನಿಕ್ಸ್ ಮಾಲ್ ಎದುರ, ಮಹದೇವಪುರ ಬೆಂಗಳೂರು–560048

---

ಸಂಖ್ಯೆ:ಸ.ಅ.ಸಂ/ಬಿ.ಇ.ಸಿ.ಸಿ/ಟೆಂಡರ್/45/26–27, ದಿನಾಂಕ: 27.07.2026

## ಎರಡು ಕವರ್ ವ್ಯವಸ್ಥೆ ಟೆಂಡರ್ ಪ್ರಕಟಣೆ
## "ಅಲ್ಪಾವಧಿ ಟೆಂಡರ್ ಪ್ರಕಟಣೆ"
## (ಕೆಪಿಪಿಪಿ–ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ 2026–27ನೇ ಸಾಲಿನಲ್ಲಿ ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಬೆಂಗಳೂರು ಪೂರ್ವ ನಗರ ಪಾಲಿಕೆಯ, ಅರಣ್ಯ ಘಟಕದ ವ್ಯಾಪ್ತಿಯಲ್ಲಿ ನೆಡುತೋಪು ನಿರ್ಮಾಣ ಹಾಗೂ ನಿರ್ವಹಣೆ ಮಾಡುವ **GBA BECC Grants** ಮತ್ತು **C.A (Compensatory Afforestation Grants**) ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಪ್ರಕಟಿಸುವ ಬಗ್ಗೆ. ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ದತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಅಹ್ವಾನಿಸಿರುವ ಬಗ್ಗೆ.

**ವಿಶೇಷ ಸೂಚನೆ:**

ಕೆ.ಡ್ಯೂ–4 ಮತ್ತು ಕೆ.ಡ್ಯೂ–3 ಟೆಂಡರ್ ಡಾಕ್ಯುಮೆಂಟ್‌ನಂತೆ ಪ್ರತ್ಯೇಕವಾಗಿ ಟೆಂಡರ್ ದಸ್ತವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಪ್ರಚೂರಪಡಿಸಿದ್ದು **(up load)** ಸದರಿ ಡಾಕ್ಯುಮೆಂಟ್‌ನಂತೆಯೇ ಎಲ್ಲಾ ಷರತ್ತುಗಳಿಗೆ ಬಿಡ್ದುದಾರರಗಳು ಬದ್ದರಾಗಿರತಕ್ಕದ್ದು, ಸದರಿ ಟಿಪ್ಪಣಿಯನ್ನು ಕೇವಲ ಬಿಡ್ದುದಾರರ ಅನುಕೂಲಕ್ಕಾಗಿ ಮಾತ್ರ **(up load)** ಪ್ರಚೂರಪಡಿಸಲಾಗುತ್ತಿದೆ.

ಕಾಮಗಾರಿಗಳ ವಿವರಗಳು

| Sl No | Name of Work | Tender Cost (Rs in lakhs) | EMD (in Rs) | Period of Completion |
|---|---|---|---|---|
| 1 | Raising of Monsoon Plantation in East City Corporation of Mahadevapura Zone-1 for the year 2026-27 and Maintenance during the year 2027-28 and 2028-29 in Mahadevapura Assembly Constituency Limits -3850 Plants (GBA BECC Grants) | 80.00 | 1,60,000/- | 31-03-2029 |
| 2 | Raising of Monsoon Plantation in East City Corporation K.R Puram zone for the year 2026-27 and Maintenance during the year 2027-28 and 2028-29 in K.R. Puram Assembly Constituency in Bile Shivale Main Road Bairathi, Arkawathi BDA Layout , Rampura Lake Main Road Rampura, Vaddara palya Layout Vaddara palya, Jayarama Reddy Layout Bairathi, Akshya soorya Layout Seegehalli, Abhivruddi Layout Seegehalli, Maruthi Meadows Layout Kottanuru and K.R. Puram Assembly Constituency Limits - 4450 Plants (GBA BECC Grants) | 91.50 | 1,83,000/- | 31-03-2029 |

| | | | | |
|---|---|---|---|---|
| **3** | Raising of Monsoon Plantation in East City Corporation Zone - 1 (C.A) for the year 2026-27, and Maintenance during the year 2027-28, 2028-29, 2029-30 and 2030-31 in Mahadevpura Assembly Constituency in Bellanduru Lake - 3840 Plants (Compensatory Afforestation Grants) | 119.98 | 2,00,000/- | 31-03-2031 |
| 4 | Raising of Monsoon Plantation (C.A) in East City Corporation K.R Puram Zone for the year 2026-27 and Maintenance during the year 2027-28, 2028-29 2029-30 and 2030-31 in K.R. Puram Assembly Constituency limits of Kalkere Lake and Rampura Lake- 3840 Plants (Compensatory Afforestation Grants) | 119.98 | 2,00,000/- | 31-03-2031 |

## ಟೈಮ್ ಷೆಡ್ಯೂಲ್

| | | | |
|---|---|---|---|
| **1** | ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: | : | **29.07.2026 ಸಂಜೆ 5.00 ನಂತರ** |
| **2** | ಟೆಂಡರ್ ಸಂಬಂಧ ಆನ್‌ಲೈನ್ ದೂರುಗಳಿದ್ದಲ್ಲಿ ನೀಡಲು ಕೊನೆಯ ದಿನಾಂಕ | : | **31.07.2026 ಸಂಜೆ 4.30** |
| **3** | ಟೆಂಡರ್ ಪೂರ್ವಭಾವಿ ಸಭೆ ದಿನಾಂಕ | : | **04.08.2026 ಸಂಜೆ 4.30 ಕ್ಕೆ ಸ್ಥಳ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಆರ್.ಹೆಚ್.ಬಿ ಕಾಲೋನಿ. ಫಿನಿಕ್ಸ್ ಮಾಲ್ ಎದುರ, ಮಹದೇವಪುರ ಬೆಂಗಳೂರು–560048** |
| **4** | ಟೆಂಡರ್‌ನ್ನು ಸ್ವೀಕರಿಸಲು ನಿಗಧಿಪಡಿಸಲಾದ ದಿನಾಂಕ | : | **07.08.2026 ಸಂಜೆ 5.30 ಕ್ಕೆ** |
| **5** | ಟೆಂಡರ್ ತೆರೆಯುವ ದಿನಾಂಕ | : | **10.08.2026 ಬೆಳಿಗ್ಗೆ 11.00ಕ್ಕೆ** |
| **5** | ಸಂಪರ್ಕಿಸಬಹುದಾದ ಕಛೇರಿ ವಿಳಾಸ. | : | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಆರ್.ಹೆಚ್.ಬಿ ಕಾಲೋನಿ. ಫಿನಿಕ್ಸ್ ಮಾಲ್ ಎದುರ, ಮಹದೇವಪುರ ಬೆಂಗಳೂರು–560048 |

**ಈ ಕೆಳಕಂಡ ಟೆಂಡರ್‌ಗಳಿಗೆ ಕರ್ನಾಟಕ ಅರಣ್ಯ ಇಲಾಖೆಯ**/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ/**ಗ್ರೇಟರ್ ಬೆಂಗಳೂರು ಅಥಾರಿಟಿ/ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ ಇಲಾಖೆಯ ಚಾಲ್ತಿಯಲ್ಲಿರುವ ಪರವಾನಗಿ ಹೊಂದಿರುವ ಗುತ್ತಿಗೆದಾರರುಗಳು ಟೆಂಡರ್‌ಗಳಲ್ಲಿ ಭಾಗವಹಿಸಬಹುದಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ಕೆ.ಪಿ.ಪಿ ಪೋರ್ಟಲ್ ಮೂಲಕ** https://kppp.karnataka.gov.in **ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು.**

**2026–27ನೇ ಸಾಲಿನಲ್ಲಿ ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಅರಣ್ಯ ಘಟಕದ ವ್ಯಾಪ್ತಿಯಲ್ಲಿ ನೆಡುತೋಪು ನಿರ್ಮಾಣ ಹಾಗೂ ನಿರ್ವಹಣೆ ಮಾಡುವ GBA BECC Grants** ಮತ್ತು **C.A (**Compensatory Afforestation Grants ) **ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.**

### ಅರ್ಹತಾ ಮಾನದಂಡ

1. **ಕರ್ನಾಟಕ ಅರಣ್ಯ ಇಲಾಖೆಯ/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ/ಗ್ರೇಟರ್ ಬೆಂಗಳೂರು/ಸಿ.ಪಿ.ಡಬ್ಲ್ಯೂ.ಡಿ / ಕೆ.ಪಿ.ಡಬ್ಲ್ಯೂ.ಡಿ ಇಲಾಖೆಯ ಚಾಲ್ತಿಯಲ್ಲಿರುವ (ಲೈಸೆನ್ಸ್) ಪರವಾನಗಿ.**
2. **ಬಿಡ್ದುದಾರರುಗಳು ಅರ್ಹರಾಗಲು ಬಿಡ್ದುದಾರರ ಹೆಸರಿನಲ್ಲಿ ಕಳೆದ 05 ಆರ್ಥಿಕ ವರ್ಷಗಳ ಅವಧಿಯಲ್ಲಿ (2020–21 ರಿಂದ 2024–25) 02 ವರ್ಷಗಳು ಈ ಕಾಮಗಾರಿ ಮೊತ್ತದ ಎರಡರಷ್ಟು ಕಾಮಗಾರಿಯನ್ನು ನಿರ್ವಹಿಸಿರುವುದನ್ನು ಪರಿಗಣಿಸಲಾಗುವುದು.**

3. **ವರ್ಷಗಳ ಆಡಿಟೆಡ್ ಟರ್ನೋವರ್ (2020–21ರಿಂದ 2024–25 ರ ವರೆಗೆ) (ಸಿ.ಎ. ರವರಿಂದ ದೃಡಿಕರಿಸಿ ಸಲ್ಲಿಸುವುದು).**

4. **ಬಿಡ್ದುದಾರರು ತಮ್ಮ ಹೆಸರಿನಲ್ಲಿ ಪ್ರಧಾನ ಗುತ್ತಿಗೆದಾರರಾಗಿ ಸಿಮಿಲರ್ ವರ್ಕ್ ಕಾಮಗಾರಿಯನ್ನು (ನೆಡುತೋಪು ನಿರ್ಮಾಣ ಹಾಗೂ ನಿರ್ವಹಣೆ ಮಾಡುವ) ಶೇ 50% ರಷ್ಟು ಪೂರ್ಣಗೊಳಿಸಿರತಕ್ಕದ್ದು.** (Single similar work, 50% cost of the Estimated Amount) **ಈ ಸಂಬಂಧ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಅವರಿಗಿಂತ ಮೇಲ್ದರ್ಜೆಯ ಅಧಿಕಾರಿಯಿಂದ ಪಡೆದ ಕಾಮಗಾರಿ ದೃಢೀಕರಣ ಪತ್ರವನ್ನು ಸಲ್ಲಿಸತಕ್ಕದ್ದು.**

5. **2026–27ನೇ ಸಾಲಿನ ನೆಡುತೋಪು ನಿರ್ಮಾಣ ಕಾಮಗಾರಿಗೆ ಹಾಗೂ 2027–28ನೇ ಸಾಲಿನ 1ನೇ ವರ್ಷದ ನೆಡುತೋಪು ನಿರ್ವಹಣೆ ಕಾಮಗಾರಿ 2028–29ನೇ ಸಾಲಿನ 2ನೇ ವರ್ಷದ ನಿರ್ವಹಣೆ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು 1ನೇ ಮತ್ತು 2ನೇ ವರ್ಷದ ನಿರ್ವಹಣೆ ಕಾಮಗಾರಿಗಳಿಗೆ ಸಂಬಂಧಿಸಿದ ಮೊತ್ತವನ್ನು ಆಯಾ ವರ್ಷದ ಬೆಂಗಳೂರು ಪೂರ್ವ ನಗರ ಪಾಲಿಕೆಯ ಅಯ್ಯವ್ಯಯ ಮತ್ತು ಕ್ರಿಯಾ ಯೋಜನೆಗೆ ಅಳವಡಿಸಿಕೊಂಡು ಬಿಲ್ ಪಾವತಿ ಮಾಡಲಾಗುವುದು. ಯಶ್ವಸ್ವಿ ಬಿಡ್ದುದಾರರು 02 ವರ್ಷಗಳ ನಿರ್ವಹಣೆ ಕಾಮಗಾರಿಯನ್ನು ನಿರ್ವಹಿಸಲು ಬದ್ದರಾಗಿರಬೇಕು**

6. C.A (Compensatory Afforestation Grants ) **ಕಾಮಗಾರಿಗಳಿಗೆ 2026–27ನೇ ಸಾಲಿನ ನೆಡುತೋಪು ನಿರ್ಮಾಣ ಕಾಮಗಾರಿಗೆ ಹಾಗೂ 2027–28ನೇ ಸಾಲಿನ 1ನೇ, 2028–29ನೇ ಸಾಲಿನ 2ನೇ, 2029–30 3ನೇ, 2030–31 4ನೇ, ವರ್ಷದ ನಿರ್ವಹಣೆ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಯಶ್ವಸಿ ಬಿಡ್ದುದಾರರು 05 ವರ್ಷಗಳ ನಿರ್ವಹನೆ ಕಾಮಗಾರಿನ್ನು ನಿರ್ವಹಿಸಲು ಬದ್ದರಾಗಿರಬೇಕು**

7. **ಚಾಲ್ತಿಯಲ್ಲಿರುವ ಇ.ಎಸ್.ಐ, ಇ.ಪಿ.ಎಫ್, ಲೇಬರ್ ಲೈಸೆನ್ಸ್ ಪ್ರತಿಗಳನ್ನು ದಾಖಲು ಮಾಡುವುದು.**

**ಷರತ್ತುಗಳು**

1. ಟೆಂಡರ್‌ದಾರರು ದಿವಾಳಿ ಮತ್ತು ಮೋಸದ ಕೃತ್ಯಗಳಿಂದ ಅನರ್ಹರೆಂದು ಕರ್ನಾಟಕ ಸರ್ಕಾರದಿಂದ ಘೋಷಿಸಲ್ಪಟ್ಟಿರಬಾರದು.

2. ಮೇಲ್ಕಂಡ ಎಲ್ಲಾ ಅರ್ಹತೆಯನ್ನು ಟೆಂಡರ್‌ದಾರರು ಹೊಂದಿದ್ದ ಬಗ್ಗೆ ಪ್ರಮಾಣ ಪತ್ರವನ್ನು ನೀಡಿದಾಗ್ಯೂ ಇ–ಪ್ರೊಕ್ಯುರ್‌ಮೆಂಟ್‌ನಲ್ಲಿ ಸಲ್ಲಿಸಿದ ದಾಖಲಾತಿಗಳು ದಾರಿ ತಪ್ಪಿಸುವಂತದ್ದು / ಸತ್ಯಕ್ಕೆ ದೂರವಾದುದು ಎಂದು ಕಂಡುಬಂದಲ್ಲಿ ಅಂತಹ ಟೆಂಡರ್‌ದಾರರ ಟೆಂಡರ್‌ಗಳನ್ನು ಅನರ್ಹ ಟೆಂಡರ್ ಎಂದು ಪರಿಗಣಿಸಲಾಗುವುದು.

3. ಟೆಂಡರ್ ದಾಖಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕವು ಸರ್ಕಾರದಿಂದ ರಜೆ ಎಂದು ಘೋಷಿಸಿದ ಸಂದರ್ಭದಲ್ಲಿ ಆ ದಿನಾಂಕದ ನಂತರದ ಕೆಲಸದ ದಿನವನ್ನು ಕೊನೆಯ ದಿನಾಂಕವೆಂದು ಪರಿಗಣಿಸಲಾಗುವುದು.

4. ಈ ಟೆಂಡರ್‌ನಲ್ಲಿ ತೋರಿಸಿರುವ ಅಂದಾಜು ಮೊತ್ತಕ್ಕೆ ಅವಶ್ಯವಿರುವ ಅನುದಾನವನ್ನು 2026–27ನೇ ಸಾಲಿನ ಕ್ರಿಯಾಯೋಜನೆ ಅನುಮೋದನೆ ಮತ್ತು ಆಯವ್ಯಯ ಅನುಮೋದನೆ ಹಾಗೂ ಕಾಮಗಾರಿ ಸಂಕೇತದ ನಿರೀಕ್ಷೆಗೆ ಒಳಪಟ್ಟು ಟೆಂಡರ್‌ನ್ನು ಕರೆಯಲಾಗಿದೆ.

5. ಯಶಸ್ವಿ ಬಿಡ್ದುದಾರರುಗಳಿಗೆ ಕಾರ್ಯಾದೇಶ ನೀಡಿದ ದಿನಾಂಕದಿಂದ ಕಾಮಗಾರಿಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಅಲ್ಲದೆ ಅಂದಾಜುಪಟ್ಟಿಯಲ್ಲಿ ನಿಗಧಿಪಡಿಸಿರುವ ಕೆಲಸಗಾರರು/ಸಾಮಗ್ರಿಗಳ ಕೊರತೆ ಇದ್ದಲ್ಲಿ ಅದಕ್ಕನುಗುಣವಾಗಿ ಬಿಲ್ಲಿನಲ್ಲಿ ಕಡಿತಗೊಳಿಸಲಾಗುವುದು.

6. **ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ಒಪ್ಪುವ ಹಾಗೂ ತಿರಸ್ಕರಿಸುವ ಹಕ್ಕನ್ನು ಮಾನ್ಯ ಆಯುಕ್ತರು ಬೆಂಗಳೂರು ಪೂರ್ವ ಪಾಲಿಕೆ, ಬೆಂಗಳೂರು ರವರು ಕಾಯ್ದಿರಿಸಿಕೊಂಡಿರುತ್ತಾರೆ.**

7. ಕೆಲಸ ಪೂರ್ಣಗೊಂಡ ನಂತರ ಮತ್ತು ಸಕ್ಷಮ ಪ್ರಾಧಿಕಾರದಿಂದ ಪರಿಶೀಲನೆಯ ನಂತರ ಮಾತ್ರ ಎಫ್‌ಎಸ್‌ಡಿಯನ್ನು ಮರುಪಾವತಿಸಲಾಗುತ್ತದೆ.

8. ಯಶಸ್ವಿ ಬಿಡ್ಡುದಾರರು ಅವರ ಹೆಸರಿಗೆ ಆಗಿರುವ ಟೆಂಡರನ್ನು ಬೇರೆಯವರಿಗೆ ಉಪ ಗುತ್ತಿಗೆ ನೀಡುವುದಾಗಲಿ ಅಥವಾ ವರ್ಗಾವಣೆ ಮಾಡುವುದಾಗಲೀ ಮಾಡತಕ್ಕದ್ದಲ್ಲ.

9. ಟೆಂಡರ್‌ಗಳಲ್ಲಿ ನಮೂದಿಸಿರುವ ಸ್ಥಳಗಳನ್ನು ಜನಪ್ರತಿನಿಧಿಗಳ / ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬೇಡಿಕೆಗಳನುಗುಣವಾಗಿ ಬದಲಾವಣೆ ಮಾಡಬಹುದಾಗಿದ್ದು ಯಶಸ್ವಿ ಬಿಡ್ಡುದಾರರು ಅದಕ್ಕೆ ಬದ್ದರಾಗಿರಬೇಕು.

10. ಟೆಂಡರ್ ಷರತ್ತುಗಳನ್ನು ಅರ್ಥೈಸುವ ಬಗ್ಗೆ, ಅವುಗಳ ಅನುಷ್ಠಾನದ ಬಗ್ಗೆ ಏನಾದರೂ ತಂಟೆ ತಕರಾರುಗಳು ಉಂಟಾದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿ.ಇ.ಸಿ.ಸಿ, ಇವರ ತೀರ್ಮಾನವೇ ಅಂತಿಮವಾಗಿದ್ದು, ಇದಕ್ಕೆ ಗುತ್ತಿಗೆದಾರರು ಬದ್ದರಾಗಿರಬೇಕು. ಆದರೆ ಮೇಲ್ಮನವಿಯನ್ನು ಮಾನ್ಯ ಅಪರ ಆಯುಕ್ತರು (ಅಭಿವೃದ್ಧಿ) ಇವರಿಗೆ ಸಲ್ಲಿಸಬಹುದಾಗಿದ್ದು, ಮೇಲ್ಮನವಿಯನ್ನು ಬಗೆಹರಿಸುವ ಅಧಿಕಾರವನ್ನು ಸದರಿ ಅಧಿಕಾರಿಗಳು ಹೊಂದಿರುತ್ತಾರೆ. ಕೆಲಸಗಳ ವಿವರಗಳು ಮತ್ತು ಹೆಚ್ಚಿನ ನಿಬಂಧನೆಗಳನ್ನು ಈ ಕಚೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.

11. ಗುತ್ತಿಗೆದಾರರ ಮತ್ತು ಅವರ ನೌಕರರಿಗೆ/ಕಾರ್ಮಿಕರಿಗೆಆಗುವ ಪ್ರಾಣಹಾನಿ, ಯಾವುದೇ ರೀತಿಯ ಕಷ್ಟ ಇತ್ಯಾದಿಗಳಿಗೆ ಬೆಂಗಳೂರು ಪೂರ್ವ ಅರಣ್ಯ ಘಟಕ ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ. ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ.

12. ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅಥವಾ ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿಯಾಗಿದ್ದಲ್ಲಿ ಅದಕ್ಕೆ ಗುತ್ತಿಗೆದಾರರೇ ನೇರ ಹೊಣೆಗಾರರಾಗುತ್ತಾರೆ ಮತ್ತು ಈ ಸಂಬಂಧ ನೀಡಬೇಕಾದ ಯಾವುದೇ ಆರ್ಥಿಕ ಪರಿಹಾರಕ್ಕೆ ಹಾಗೂ ನ್ಯಾಯಾಲಯ ಪ್ರಕರಣಗಳಿಗೆ ಗುತ್ತಿಗೆದಾರರೇ ನೇರ ಹೊಣೆಗಾರರಾಗಿರುತ್ತಾರೆ.

13. ಕಪ್ಪುಪಟ್ಟಿಗೆ ಸೇರಿಸಲಾದ ಗುತ್ತಿಗೆದಾರರು / ಸರ್ಕಾರಿ / ಅರೆ ಸರ್ಕಾರ / ಮಂಡಳಿಗಳು / ಬಿಬಿಎಂಪಿ/ಜಿ.ಬಿ.ಎ ಇತ್ಯಾದಿಗಳು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಲ್ಲ, ಕಂಡುಬಂದಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುತ್ತದೆ. ಎಲ್ಲಾ ಭಾಗವಹಿಸುವವರು ಅಗತ್ಯವಿದ್ದಾಗ ಪರಿಶೀಲನೆಗಾಗಿ ಎಲ್ಲಾ ಮೂಲ ದಾಖಲೆಗಳನ್ನು ಹಾಜರುಪಡಿಸಬೇಕು.

14. ಬಿಡ್ಡಾರರು ಟೆಂಡರ್‌ನಲ್ಲಿ ಉಲ್ಲೇಖಿಸಲಾದ ಕೆಲಸದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆಮಾಡಿ ಬಿಡ್ಡನ್ನು ಸಲ್ಲಿಸತಕ್ಕದ್ದು ಹಾಗೂ ಈ ಸಂಬಂಧ ವಲಯ ಅರಣ್ಯಾಧಿಕಾರಿಯಿಂದ ಸ್ಥಳ ಪರಿಶೀಲನಾ ಪ್ರಮಾಣಪತ್ರವನ್ನು ಪಡೆದು, ಬಿಡ್ಡು ಸಲ್ಲಿಸುವಾಗ ಸಲ್ಲಿಸತಕ್ಕದ್ದು. ಒಂದು ವೇಳೆ ಸ್ಥಳ ಬದಲಾವಣೆಯಾದಲ್ಲಿ ಅದಕ್ಕೆ ಯಶಸ್ವಿ ಬಿಡ್ಡುದಾರರು ಬದ್ದರಾಗಿರಬೇಕು, ಸ್ಥಳ ಬದಲಾವಣೆ ಬಗ್ಗೆ ತದನಂತರ ಆಕ್ಷೇಪಣೆಗೆ ಆಸ್ಪದವಿರುವುದಿಲ್ಲ.

15. ಕೆಲಸ ನಿರ್ವಹಿಸುವ ಸಂದರ್ಬದಲ್ಲಿ ಸಾರ್ವಜನಿಕರಿಂದ ಹಣ ಕೇಳುವುದು/ಪಡೆಯುವುದು ಹಾಗೂ ಇತರೆ ಬೇಡಿಕೆಗಳನ್ನು ಒಡ್ಡಿದಲ್ಲಿ ಈ ಸಂಬಂಧ ದೂರುಗಳು ಬಂದಲ್ಲಿ ಋಜುವಾತಾದಲ್ಲಿ ನಿಮ್ಮ ಗುತ್ತಿಗೆಯನ್ನು ರದ್ದುಗೊಳಿಸಿ ಕಾನೂನಾತ್ಮಕ ಕ್ರಮ ಜರುಗಿಸಲಾಗುವುದು.

16. ಯಶಸ್ವಿ ಟೆಂಡರ್‌ದಾರರು ಕರಾರು ನಾಮೆಯನ್ನು ಸಹಿ ಮಾಡಿದ ನಂತರ ಟೆಂಡರ್‌ನ್ನು ಹಿಂತೆಗೆದುಕೊಂಡಲ್ಲಿ ನಿಗಧಿತ ಸಮಯದಲ್ಲಿ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ, ಕಾಮಗಾರಿಯ ಬಗ್ಗೆ ನಿರಾಸಕ್ತಿ ಹೊಂದಿದಲ್ಲಿ, ಅಂತಹ ಟೆಂಡರ್‌ದಾರರ ಇ.ಎಂ.ಡಿ. ಮತ್ತು ಭದ್ರತಾ ಠೇವಣಿಗಳನ್ನು ಪಾಲಿಕೆಗೆ ಮುಟ್ಟುಗೋಲು ಮಾಡಲಾಗುವುದು.

**ಸಹಿ/–**

**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ**

**ಬೆಂಗಳೂರು ಪೂರ್ವ ನಗರ ಪಾಲಿಕೆ**